ಯಥಾಪ್ರಕಾರ ಒಲಿಂಪಿಕ್ ಓಟ ಮಾಡುವ ದುಸ್ಥಿತಿ ನಮ್ಮದಾಗಿರುತ್ತಿತ್ತು. ಈ ರಾದ್ಧಾಂತವೇ ಬೇಡ ಎಂದು ಭಾವಿಸಿದ ಬೀಡಿ ಸೇಯುವ ಅಪ್ಪನ ಮಕ್ಕಳೆಲ್ಲ ಮಾಡುತ್ತಿದ್ದುದು ಒಂದೇ ಕೆಂಡದ ಮೇಲೆ ಬೀಡಿಯ ಬಾಯಿಯಿಟ್ಟು, ತುಟಿಗೆ ಬೀಡಿಯ ತುದಿ ಏರಿಸುತ್ತಿದ್ದೆವು. ಎಳೆದ ದಮ್ಮಿಗೆ ಲಕಲಕ ಹೊಳೀತಿತ್ತು ಬೀಡಿಯ ಕಿಡಿ. ಒಲಿಂಪಿಕ್ ಓಟ ಬಿಟ್ಟು ಆರಾಮವಾಗಿಯೇ ನಡಕೊಂಡು, ಮಧ್ಯದಲ್ಲಿ ಮತ್ತೊಂದು ದಮ್ಮು ಎಳೆದು, ಕಿಡಿಯನ್ನು ಫ್ರೆಶ್ ಮಾಡಿ ಅಪ್ಪನಿಗೆ ತಲುಪಿಸುತ್ತಿದ್ದೆವು. ಅಪ್ಪನ ದಮ್ಮುಯಾತ್ರೆ ಆಮೇಲೆ ಮಾಮೂಲಾಗಿ ಮುಂದುವರೆಯುತ್ತಿತ್ತು. ತಾತನ ಸಿಗರೇಟಿಗೆ ಅಪ್ಪನ ಬೀಡಿಯಷ್ಟು ಮಹತ್ವ ಸಿಗದಿರಲು ಇದೇ ಮುಖ್ಯ ಕಾರಣವಿರಬೇಕು.

ನಮ್ಮ ಕೆರೆಯಂಗಳದಲ್ಲಿ ಬೀಡಿ ನುಸ್ರತ್ ಎಂಬ ಹೆಸರೊಂದು ಬಹಳವೇ ಪ್ರಸಿದ್ಧವಾಗಿತ್ತು. ಪ್ರಸಿದ್ಧ ಅನ್ನೋದಕ್ಕಿಂತ ಕುಖ್ಯಾತ ಅನ್ನಬಹುದೇನೋ. 'ಬೀಡಿ ನುಸ್ರತ್' ಅನ್ನೋದನ್ನು ಮೊದಮೊದಲ ಬಾರಿಗೆ ಕೇಳಿಸಿಕೊಂಡೋರು ಆಶ್ಚರ್ಯದಿಂದಲೇ 'ಇದ್ಯಾವ್ದು ಹೊಸ ಬೀಡಿ? ಗಣೇಶ್ ಬೀಡಿ, 93, ಜಯಲಕ್ಷ್ಮಿ ಬೀಡಿ, ಮಂಗ್ಳೂರ್ ಬೀಡಿ ಕೇಳಿದೀವಿ ಇದ್ಯಾವ್ದು ನುಸ್ರತ್ ಬೀಡಿ?!' ಎಂದು ಕೇಳುವವರೂ ಇದ್ದರು. ನಮಗೆಲ್ಲಾ ಬೀಡಿ ನುಸ್ರತ್ ಕಥೆ ಗೊತ್ತಿದ್ದರಿಂದ ಅಂಥ ಆಶ್ಚರ್ಯವೇನೂ ಆಗ್ತಿರಲಿಲ್ಲ. ಆದರೆ, ನೋಡುವ ಕುತೂಹಲ ಮಾತ್ರ ತಣಿಯುತ್ತಿರಲಿಲ್ಲ. ಬೀಡಿ ನುಸ್ರತ್ ಯಾವುದೋ ಕಂಪನಿಯ ಹೆಸರಾಗಿರಲಿಲ್ಲ. ನುಸ್ರತ್ ಅನ್ನೋ ಹೆಣ್ಣು ಮಗಳು ಕದ್ದುಮುಚ್ಚಿ ಬೀಡಿ ಸೇಯುತ್ತಿದ್ದುದು ಹಂತ ಹಂತವಾಗಿ ಬಹಿರಂಗವಾಗಿ, ನುಸ್ರತ್ ಎಂದು ಕರೆಯಲ್ಪಡುತ್ತಿದ್ದವರೆಲ್ಲ 'ಬೀಡಿ ನುಸ್ರತ್' ಎಂದು ಕರೆಯಲು ಶುರು ಮಾಡಿದ್ದರು.

ಅದೊಮ್ಮೆ ನುಸ್ರತ್ ಕಕ್ಕಸ್ಸಿಗೆಂದು ಕೆರೆಯ ಮರೆಯಲ್ಲಿ ಹೋಗಿದ್ದಳಂತೆ. ಅಲ್ಲಿ ಬೀಡಿ ಹಚ್ಚಿಕೊಂಡು ಹೊಗೆ ಬಿಡುತ್ತಾ ಕೂತಿರಬೇಕಾದರೆ ಅಲ್ಲೇ ಹತ್ತಿರ ಝಾಡಿಗಳಲ್ಲಿ ಹನುಮಂತಪ್ಪನೂ ಹೋಗಿ ಕುಳಿತುಬಿಟ್ಟಿದ್ದಾನೆ. ಬೀಡಿ ಹಚ್ಚಲು ತಂದಿದ್ದ ಬೆಂಕಿಪೊಟ್ಣ ಕೈಕೊಟ್ಟಿದೆ. ಬೀಡಿ ಹಚ್ಚಿಕೊಳ್ಳದೇ ಕಕ್ಕಸ್ಸು ಮಾಡುವ ಮಜಾನಾದ್ರು ಹೇಗೆ ತಗೊಳ್ಳೋದು ಅಂತ ಭಾವಿಸಿ ಎದ್ದುನಿಂತಿದ್ದಾನೆ. ಹತ್ತಿರದಲ್ಲೇ ಯಾರೋ ಹೊಗೆ ಬಿಡೋದನ್ನು ನೋಡಿ, ಒಂದೆರಡು ಹೆಜ್ಜೆ ಅತ್ತ ಹೋಗಿ, 'ಗುರೂ, ಬೆಂಕಿಪೊಟ್ಣ ಇತ್ಲಾಗ್ ಎಸಿಯಣ್ಣೋ' ಎಂದಿದ್ದಾನೆ. ಪೊದೆಯೊಳಗೆ ಅವಿತು ಕುಳಿತು ಒಳ ಸೆಳೆದುಕೊಳ್ಳುವ ಮತ್ತು ಹೊರ ಕಳಿಸುವ ಸುಖ ಅನುಭವಿಸುತ್ತಿದ್ದ ನುಸ್ರತ್ ಧಡಕ್ಕನೆ ಎದ್ದುನಿಂತುಬಿಟ್ಟಿದ್ದಾಳೆ. ಕ್ಷಣಹೊತ್ತು ಇಬ್ಬರೂ ಗಾಬರಿಗೊಂಡು ದಿಕ್ಕಾಪಾಲಾಗಿ ಓಟ ಕಿತ್ತಿದ್ದಾರೆ. ನುಸ್ರತ್ ಮೊದಲ ಸಾರಿಗೆ ಬೀಡಿ ಸೇಯುವಾಗ ಸಿಕ್ಕಿಬಿದ್ದಿದ್ದು ಹಾಗೆ. ಅದನ್ನು ಈಗಲೂ ಹನುಮಂತಪ್ಪ ರೋಚಕವಾಗಿಯೇ ಹೇಳುತ್ತಿರುತ್ತಾನೆ.

ಕೆರೆಯ ಸುತ್ತಲಲ್ಲಿನ ಪೊದೆಗಳಲ್ಲಿ ಕಕ್ಕಸ್ಸಿಗೆ ಕುಳಿತವರಲ್ಲಿ ಯಾರಾದರೂ ಹೊಗೆ ಬಿಡುತ್ತಿದ್ದಾರೆಂದರೆ ಅಲ್ಲಿ ಗಂಡಸೇ ಕುಳಿತಿದ್ದಾನೆ ಎಂಬ ನಿರ್ಧಾರಕ್ಕೆ ಈಗಲೂ ಕೆರೆಯಂಗಳದ ಜನ ಬರದೇ ಇರಲು ಕಾರಣ ನುಸ್ರತ್. 'ಬೀಡಿ ನುಸ್ರತ್' ಎಂದು ಆರಂಭದಲೆಲ್ಲಾ ಕರೆಯುತ್ತಿದ್ದರೆ ಕೆಂಗಣ್ಣು ಬಿಟ್ಟು ಕೆಟ್ಟದಾಗಿ ಬೈಯುತ್ತಿದ್ದ ನುಸ್ರತ್‌ಗೆ ಈಗ್ಯಾರಾದ್ರೂ ಬರೀ 'ನುಸ್ರತ್' ಎಂದರೆ ತಿರುಗಿಯೂ ನೋಡದಷ್ಟು ಬೀಡಿಯನ್ನು ಒಪ್ಪಿಕೊಂಡಿದ್ದಾಳೆನಿಸುತ್ತದೆ. ಮಗಳಿಗೆ ಅಳಿಯ ಕರುಣ ಸಿದ್ದಾಳೆ. ಮಗನಿಗೆ ಸೊಸೆ ತಂದುಕೊಂಡಿದ್ದಾಳೆ. ಮಗನಿಗೂ ಅಳಿಯನಿಗೂ ಇಲ್ಲದ ಬೀಡಿಯ ನಂಟು ನುಸ್ರತ್‌ಗೆ ಅದ್ಹೇಗೆ ತಗಲಿಕೊಂಡಿತೋ? ಬಹುಶಃ ನುಸ್ರತ್‌ಳ ಅಪ್ಪ ಬೀಡಿಗೆ ಕಿಡಿ ಹಚ್ಚಿಕೊಂಡು ಬರಲು ಈಕೆಗೆ ಹೇಳುತ್ತಿದ್ದನೇನೋ! ನುಸ್ರತ್ ಈಗ ಅದೆಷ್ಟು ಗಟ್ಟಿಯಾಗಿದ್ದಾಳೆಂದರೆ, ಗಂಡಸರ ಸರಿಸಮವಾಗಿ ಕುಳಿತು ಬೀಡಿ ಸೇದುತ್ತಾಳೆ. ಗಂಡಸರಿಗಿಂತ ಒಂದು ಕೈ ಮೇಲೆಂಬಂತೆ ಹೊಗೆ ಬಿಡುತ್ತಾಳೆ.

ಬೀಡಿ ಚಟಸ್ಥರಲ್ಲಿ ಕೆಲವರದು ವಿಶೇಷ ವ್ಯಕ್ತಿತ್ವ. ನೇರವಾಗಿಯೇ, 'ಬೀಡಿ ಬೆಂಕಿಪೊಟ್ಣಕ್ಕೆ ಏನಾದ್ರೂ ಕಾಸಿದ್ರೆ ಕೊಡಣ್ಣಾ' ಅಂತ ಮುಖ ಮುಲಾಜಿಲ್ಲದೆ ಕೇಳುವವರಿದ್ದಾರೆ. ನಮ್ಮ ಮನೆಯ ಹತ್ತಿರದಲ್ಲೇ ಸುಬ್ಬಾನಾಯ್ಡು ಅನ್ನೋ ಹೆಸರಿನ ತುಂಬಾನೆ ವಯೋವೃದ್ಧರೊಬ್ಬರಿದ್ದಾರೆ. ಗುಡಿಸಲು ಕಟ್ಟಿಕೊಂಡು ವಾಸವಿದ್ದಾರೆ. ರಸ್ತೆ ಕೆಲಸಕ್ಕೆಂದು ಆಂಧ್ರದಿಂದ ಬಂದಿದ್ದ ಸುಬ್ಬಾನಾಯ್ಡು ಆ ಗುಡಿಸಲಲ್ಲೇ ಅದೆಷ್ಟು ವರ್ಷ ಕಳೆದಿದ್ದಾರೋ ಅಜ್ಜನ ಮುಖದ ಮೇಲಿದ್ದ ನೆರಿಗೆಗಳ ಆಧಾರದ ಮೇಲೆ ಲೆಕ್ಕಾಚಾರ ಹಾಕಿದರೂ ಅಜ್ಜ ಶತಮಾನ ದಾಟಿದೆ ಎನಿಸದಿರದು. ನನಗೆ ಆಶ್ಚರ್ಯವೆನಿಸೋದು ಸಿಗರೇಟು ಸೇದಿ ಶತಮಾನ ಕಂಡೋರಿಲ್ಲ. ಅದೇ ಬೀಡಿ ಸೇದಿ ಶತಮಾನ ಮುಟ್ಟಿದೋರು ಮತ್ತು ದಾಟಿದೋರು ಇದ್ದಾರೆ ಅನ್ನೋದು. ಇದೆಷ್ಟು ನಿಜವೋ ಸುಳ್ಳೋ ಗೊತ್ತಿಲ್ಲ. ನನಗೆ ಅಂಥ ಅನುಭವಗಳು ನೋಡಲು ಸಿಕ್ಕಿವೆ. ಸುಬ್ಬಾನಾಯ್ಡು ಅಂಥ ಅಚ್ಚರಿ ಉಂಟು ಮಾಡಿದವರಲ್ಲಿ ಒಬ್ಬರು. ನಾನು ಸಣ್ಣ ಹುಡುಗನಾಗಿದ್ದಾಗಿಂದ ಹಿಡಿದು ಈಗ ನಲವತ್ತು ತಲುಪುವವರೆಗೂ ಸುಬ್ಬಾನಾಯ್ಡು ಹೇಗಿದ್ದರೋ ಹಾಗೇ ಇದ್ದಾರೆ. ಬದಲಾವಣೆ ಆಗಿರೋದು ಈಗ ಗೂರಲು ಕೆಮ್ಮು ಕೆಮ್ಮುತ್ತಿದ್ದಾರೆ ಅನ್ನೋವಲ್ಲಿ ಮಾತ್ರ. ಬೀಡಿ ಹಚ್ಚಿ ಪುಸಪುಸಾಂತ ದಮ್ಮು ಎಳೆದು ಬಿಡೋದರಲ್ಲಿ ನಾನು ಕಂಡಂತೆ ಸುಬ್ಬಾನಾಯ್ಡುರನ್ನು ಮೀರಿಸಿದೋರು, ಮೀರಿಸೋರು ಇದ್ದಂಗಿಲ್ಲ.

ಸಿಗರೇಟು ಬಿಡಲು ಈಗೆಲ್ಲ ಸುಲಭ ವಿಧಾನಗಳೂ ಬಂದುಬಿಟ್ಟಿವೆ. ಚುಯಿಂಗಮ್ ಜಗಿಯಿರಿ ಹನ್ನೆರಡು ವಾರಗಳಲ್ಲಿ ಸಿಗರೇಟು ಬಿಡಿರಿ ಎಂಬಂಥ ಜಾಹಿರಾತುಗಳನ್ನು ನಾನುನೀವು ದಿನನಿತ್ಯ ಟಿವಿ ಪರದೆಗಳಲ್ಲಿ ನೋಡುತ್ತಿರುತ್ತೇವೆ. ಆದರೆ, ಬೀಡಿ ಬಿಡಿಸುವ ಒಂದೇ ಒಂದು ಜಾಹಿರಾತನ್ನು ಯಾವುದೇ ಕಂಪನಿ ಬಿಡುಗಡೆ ಮಾಡಿಲ್ಲ ಅಂತ ಆಗಾಗ ನಾನು, ನನ್ನ ಗೆಳೆಯರು ತಮಾಷೆ ಮಾಡುತ್ತಿರುತ್ತೇವೆ.

ಈಗೆಲ್ಲ ಫಿಲ್ಟರ್‌ಗಳ ದುನಿಯಾ. ಫಿಲ್ಟರ್ ಇಲ್ಲದೆ ತನ್ನ ಮೂಲ ಆಕೃತಿ ಮತ್ತು ಗುಣಗಳನ್ನು ಉಳಿಸಿಕೊಂಡು ಬಂದಿರೋದು ಎಂದರೆ ಅದು ಬೀಡಿನೇ ಇರಬೇಕು. ಶಿವಮೊಗ್ಗಕ್ಕೆ ಹತ್ತಿರದಲ್ಲೇ ಬನ್ನಿಕೆರೆ ಅಂತ ಊರೊಂದಿದೆ. ಯಾವುದೋ ಕೆಲಸದ ಮೇಲೆ ಅಲ್ಲಿಗೊಮ್ಮೆ ಗೆಳೆಯರ ಜೊತೆ ಹೋಗಿದ್ದೆ. ಊರಿಗೆ ಪ್ರವೇಶವಾಗುತ್ತಿದ್ದಂತೆಯೇ ಪುಟ್ಟದೊಂದು ಟೀ ಕ್ಯಾಂಟೀನಿತ್ತು. ಚಾ ಕುಡಿಯೋದು ಎಂದು ನಿರ್ಧರಿಸಿ ನಿಂತೆವು. ಸುಮಾರು ಎಂಬತ್ತು ವಯಸ್ಸಿನ ಅಜ್ಜ, 'ತತ್ತಾಲರ್ ಬೀಡೀನಾ'ಅಂತ ಆರ್ಡರ್ ಮಾಡುತ್ತಿದ್ದುದು ಗಮನಿಸುವಂತಿತ್ತು. ಕ್ಯಾಂಟೀನಿನವನು ಬೀಡಿ ಕಟ್ಟು ತಂದುಕೊಟ್ಟ. ಕಟ್ಟನ್ನು ರಪರಪ ಉಜ್ಜಿದ ಅಜ್ಜ, ಕವರು ಒಡೆದು ಒಂದು ಬೀಡಿ ಎಳೆದುಕೊಂಡ. ತನ್ನ ಪಂಚೆಯನ್ನು ಎತ್ತಿಕೊಂಡು, ಪಂಚೆಯ ತುದಿಗೆ ಬೀಡಿ ಸಿಗಿಸಿ, ಸೂಕ್ಷ್ಮವಾಗಿ ಬಾಯಿಗಿಟ್ಟುಕೊಂಡ. ಬೀಡಿಗೆ ಕಿಡಿ ಹತ್ತಿಸಿದ. ದಮ್ಮು ಎಳೆದು ಬಿಡತೊಡಗಿದ. ಬೀಡಿ ಸೇಯುವ ಆ ಅಜ್ಜನ ಸ್ಟೈಲಿನ ಮುಂದೆ ಮೊದಲ ಬಾರಿಗೆ ರಜನಿಕಾಂತ್ ಸ್ಟೈಲು ಸಪ್ಪೆ ಎನಿಸಿತು. ಪೂರ್ತಿ ಬೀಡಿ ಸೇದಿ, ಉಳಿದ ಬೀಡಿಯ ತುಂಡು ಎಸೆದು ಪಂಚೆಯ ತುದಿ ಸರಿಮಾಡಿಕೊಂಡ. ಆ ಪಂಚೆಯ ತುದಿಯೋ ಕಪ್ಪುಬಣ್ಣಕ್ಕೆ ತಿರುಗಿ ಹೋಗಿತ್ತು. ಅಜ್ಜ ಬೀಡಿಗಳನ್ನೆಲ್ಲ ಇದೇ ಪಂಚೆಯ ಮೂಲಕವೇ ಸೇಯೋದು ಎಂಬ ಸತ್ಯವನ್ನು ಆ ಮೂಲಕ ಅರ್ಥಮಾಡಿಕೊಂಡೆ. ಪಂಚೆಯೇ ಬೀಡಿಯ ಫಿಲ್ಟರ್ ಆದ ದೃಶ್ಯವದು.

ಗಮನಿಸಿ ನೋಡಿ, ಬೀಡಿ ಮತ್ತು ಸಿಗರೇಟಿನ ಮಧ್ಯೆ ಬಡವಬಲ್ಲಿದನ ಅಂತರವಿದೆ. ಸಿಗರೇಟು ಸೇದುವ ಬಡವರನ್ನು ನೋಡಿದ್ದೇನೆ. ಬೀಡಿ ಸೇದುವ ಶ್ರೀಮಂತರನ್ನು ನಾನು ಇಲ್ಲಿಯವರೆಗೂ ಕಂಡಿಲ್ಲ. ಆದರೆ, ಶ್ರೀಮಂತರಲ್ಲಿ ಕೆಲವರು ಕದ್ದುಮುಚ್ಚಿ ಬೀಡಿ ಸೇದುವವರಿದ್ದಾರೆ ಎಂದಷ್ಟೇ ಕೇಳಿದ್ದೇನೆ. ಬಡವನಿಗೆ ಬೀಡಿಯ ನಂಟು ಶ್ರೀಮಂತನಿಗೆ ಸಿಗರೇಟಿನ ನಂಟು ಎಂಬ ಹೊಸ ಗಾದೆಯೂ ಹುಟ್ಟಿಕೊಂಡಂತಿದೆ ಇತ್ತೀಚಲಾಗಿ. ನಟ ಉಪೇಂದ್ರ ಸಿಗರೇಟಿನ ಫಿಲ್ಟರ್‌ಗೆ ಬೀಡಿ ಸಿಕ್ಕಿಸಿಕೊಂಡು ಸೇದುವ ದೃಶ್ಯ ಯಾವಾಗಲೋ ನೋಡಿದ ನೆನಪು. ಒಮ್ಮೊಮ್ಮೆ ವಿಚಿತ್ರ ಅನಿಸುತ್ತೆ; ನನ್ನಪ್ಪ ಬೀಡಿ ಸೇದುತ್ತಾನೆ ನಾನು ಸಿಗರೇಟಿನ ದಾಸ. ನಾನು ಸೇದುವ ಸಿಗರೇಟೊಂದರ ಬೆಲೆಗೆ ಇಡೀ ಬೀಡಿ ಕಟ್ಟೇ ಖರೀದಿಸಬಹುದು ನನ್ನಪ್ಪ. ಕೆಲವರು ಹೇಳುತ್ತಿರುತ್ತಾರೆ 'ನೀ ಸುಟ್ಟು ಹಾಕೋ ಸಿಗರೇಟಿನ ದುಡ್ಡು ಕೂಡಿಟ್ಟರೂ ಸಾಕಿತ್ತು, ಕಾರುಬಂಗ್ಲೆ ತಗೋಬೋದಿತ್ತು' ಅಂತ. ಇದೆಲ್ಲಾ ತಮಾಷೆ ಮಾತುಗಳ ಮಧ್ಯದಲ್ಲಿ ನನಗೆ ಕೊನೆಗೂ ಕಾಡೋದು ಅಪ್ಪನ ಬೀಡಿ ಮತ್ತದರ ಕೆಂಡದಂತಹ ಕಿಡಿಗಳು.

ಧೂಮಪಾನಿಗಳ ವಿರುದ್ಧದ ಬುದ್ಧಿವಾದದ ಮಾತುಗಳ ನಡುವೆಯೇ ನನಗೆ ಇಷ್ಟವಾಗೋದು ಅಪ್ಪನ ಬೀಡಿಯ ಘಮ. ಆ ಘಮವೋ ಮೈಸೂರು ಮಲ್ಲಿಗೆಯ ಘಮಘಮಕ್ಕಿಂತ ಅದ್ಭುತ. ಯಾಕೆಂದರೆ, ಅಪ್ಪನ ಬೀಡಿಯ ಘಮದಲ್ಲಿ ಬೆವರಿನ ಘಾಟಿರುತ್ತೆ. ಅದು ನನ್ನ ಬದುಕನ್ನು ಕಾಪಾಡುತ್ತಿರುತ್ತೆ. ಪದೇ ಪದೇ ಎಚ್ಚರಿಸುತ್ತಿರುತ್ತೆ.

ಬೀಡಿ ನನ್ನ ಬದುಕಿನುದ್ದಕ್ಕೂ ಭಿನ್ನ ವಿಭಿನ್ನ ಅನುಭವಗಳನ್ನು ನೀಡುತ್ತಲೇ ಬಂದಿದೆ. ಇನ್ನಿಲ್ಲದ ಆನಂದವೂ ದುಃಖವೂ ಕೊಟ್ಟಿದೆ. ಒಳಗೆ ಕುದ್ದ ನೋವು ಹೊರಗೆ ಧೂಮವಾಗಿ ಹಬ್ಬಿದೆ ಹಾಗೆಂದು ಬೀಡಿ ಸೇದುವವರ ಮಧ್ಯೆ ಅಪ್ಪನನ್ನು ಹುಡುಕುತ್ತಿರುತ್ತೇನೆ.